ಈ. ಪ್ರಶ್ನೆಗಳಿಗೆ ಉತ್ತರಗಳು ಬಾರದೇ ಇರುವ ಬಗ್ಗೆ

ಶ್ರೀ ವಿ.ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ನಾನು ಕಳುಹಿಸಿದಂಥ 17 ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಬಂದಿಲ್ಲ. ಈಗ ಮತ್ತೆ ಪ್ರಶ್ನೋತ್ತರ ಪ್ರಾರಂಭ ಆಗಿದೆ. ಮತ್ತೆ ಈ ಸಾರಿ ಕೂಡ ಉತ್ತರ ಬಂದಿಲ್ಲ. ಈ ರೀತಿಯಾದರೆ ನಾವು ಯಾತಕ್ಕೋಸ್ಕರ ಪ್ರಶ್ನೆಯನ್ನು ಕಳುಹಿಸಿಕೊಡಬೇಕು?

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಕಳೆದ ಅಧಿವೇಶನದಲ್ಲಿ ಸುಮಾರು 139 ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಟ್ಟಿಲ್ಲ. ಆದ್ದರಿಂದ, ಇದರ ಬಗ್ಗೆ ಬಹಳ ಗಂಭೀರವಾಗಿ ನಾವು ಪರಿಗಣಿಸಬೇಕಾಗುತ್ತದೆ. ಮತ್ತೆ ಇದೊಂದು ಸರ್ಕಾರದ ಮೇಲೆ ಪರಿಣಾಮ ಕೂಡ ಆಗುತ್ತದೆ. ಆದ್ದರಿಂದ, ದಯಮಾಡಿ ಎಲ್ಲಾ ಸಚಿವರಲ್ಲಿ ಮತ್ತು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ಅಧಿವೇಶನ ಮುಗಿಯುವದರೊಳಗೆ ಕಳೆದ ಅಧಿವೇಶನದಲ್ಲಿ ಯಾವ್ಯಾವ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೋ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಸಂಬಂಧಪಟ್ಟಂಥ ಸದಸ್ಯರಿಗೆ ಕಳುಹಿಸಬೇಕೆಂದು ನಾನು ಎಲ್ಲಾ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಪ್ರಶ್ನೋತ್ತರ ವೇಳೆ. ಮಾನ್ಯ ಬಿ.ಆರ್.ಪಾಟೀಲ್‌ರವರು ತಮ್ಮ ಪ್ರಶ್ನೆಯನ್ನು ಪ್ರಸ್ತಾಪ ಮಾಡಿ.

ಪ್ರಶ್ನೋತ್ತರ

ಅನಿರ್ಭಂದಿತ ಮರಳು ಗಣಿಗಾರಿಕೆ

136 (2145) ಶ್ರೀ ಪಾಟೀಲ್ ಬಿ.ಆರ್. (ಆಳಂದ)ರವರು ಕೆಳಕಂಡ ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅನಿರ್ಭಂದಿತ ಮರಳು ಗಣಿಗಾರಿಕೆಯಿಂದ ರಾಜ್ಯದ ಪರಿಸರ ಮತ್ತು ಅಂತರ್ಜಲ ಮಟ್ಟದ ಮೇಲೆ ಆಗಿರುವ ಪರಿಣಾಮ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಇದರಲ್ಲಿ ಈ ರೀತಿ ಗಣಿಗಾರಿಕೆ ಮಾಡುವವರು ಸರ್ಕಾರದಿಂದ ಪರವಾನಗಿ ಪಡೆದಿರುವವರ ಸಂಖ್ಯೆ ಎಷ್ಟು ;

ಇ. ಅವರಿಗೆ ನಿಗದಿಪಡಿಸಿರುವ ವಿಸ್ತೀರ್ಣವೇನು;

ಈ. ಇದು ಖಾಸಗಿಯದೇ ಅಥವಾ ಸರ್ಕಾರದ್ದೇ;

ಉ. ಗಣಿಗಾರಿಕೆಯಿಂದ ಪ್ರತಿ ಎಕರೆಯಲ್ಲಿ ದೊರಕುವ ಮರಳು ಪ್ರಮಾಣಕ್ಕೆ ಸರಿಯಾಗಿ ಸರ್ಕಾರಕ್ಕೆ ರಾಜಧನ ಸಂದಾಯವಾಗಿದೆಯೇ;

ಊ. ಆಗಿದ್ದರೆ, ಎಷ್ಟು ಹಣ ಸಂದಾಯವಾಗಿದೆ (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ-ಅಂಶಗಳನ್ನು ಒದಗಿಸುವುದು);

ಋ. ಆಹಾರ ಪ್ರಮಾಣದ ಕಟ್ಟಡ ಸಾಮಾಗ್ರಿ ಮತ್ತು ಮರಳನ್ನು ಮಿತಿಮೀರಿ ಹೇರಿಕೆಯಿಂದ ಸಾಗಿಸುತ್ತಿದ್ದ ವಾಹನಗಳಿಂದ ರಾಜ್ಯದ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ೠ. ಕಾನೂನು ಬಾಹಿರ ಗಣಿಗಾರಿಕೆ ಮಾಡಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಎ. ಕಟ್ಟಡ ಸಾಮಾಗ್ರಿಗಳನ್ನು ಹೊತ್ತು ರಸ್ತೆಗಳಲ್ಲಿ ಓಡಾಡುವ ವಾಹನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲು ಸರ್ಕಾರ ಚಿಂತಿಸುತ್ತಿದೆಯೇ?